॥ ಶ್ರೀಮಾಣಿಕ್ಯಪ್ರಭುರ್ವಿಜಯತೇ ॥

# ಶ್ರೀ ದತ್ತಜಯಂತಿ ಮಹೋತ್ಸವ
## 2025



ದತ್ತಾತ್ರೇಯಂ ಮಹೇಶಾನಂ ಸರ್ವಯೋಗವಿಶಾರದಮ್ |
ಮನೋಹರಸುತಂ ಗೌರಂ ವಂದೇಹಂ ಮಾಣಿಕಪ್ರಭುಮ್ ||

॥ श्री गुरु अवधूत ॥

**ಶ್ರೀ ಜ್ಞಾನರಾಜ ಮಾಣಿಕಪ್ರಭು**

एकं सद्विप्रा बहुधा वदन्ति

**ವಿಶ್ವಾವಸುನಾಮ ಸಂವತ್ಸರ 1947**
**ಶ್ರೀಮಾಣಿಕ ಶಕೆ 208**

**ಶ್ರೀ ಭಕ್ತಕಾರ್ಯಕಲ್ಪದ್ರುಮ ಗುರುಸಾರ್ವಭೌಮ ಶ್ರೀಮದ್ರಾಜಾಧಿರಾಜ ಯೋಗಿ-ಮಹಾರಾಜ ತ್ರಿಭುವನಾನಂದ ಅದ್ವೈತ ಅಭೇದ ನಿರಂಜನ ನಿರ್ಗುಣ ನಿರಾಲಂಬ ಪರಿಪೂರ್ಣ ಸದೋದಿತ ಸಕಲಮತಸ್ಥಾಪಿತ ಶ್ರೀ ಸದ್ಗುರು ಮಾಣಿಕಪ್ರಭು ಮಹಾರಾಜ ಕಿ ಜಯ್!**

ಸಾಧಾರಣ ಮನುಷ್ಯನ ಜನ್ಮಕ್ಕೂ ದಿವ್ಯ ಮಹಾಪುರುಷರ ಆವಿರ್ಭಾವಕ್ಕೂ ವ್ಯತ್ಯಾಸವಿರುತ್ತದೆ. ಮನುಷ್ಯನು 'ಜನ್ಮ' ತಾಳಿದರೆ ದೈವೀ ಪುರುಷರು 'ಅವತಾರ' ತಾಳುತ್ತಾರೆ. ಮನುಷ್ಯನ ಜನ್ಮಕ್ಕೂ ಮತ್ತು ಭಗವಂತನ ಅವತಾರಕ್ಕೂ ಇರುವ ವ್ಯತ್ಯಾಸವೆಂದರೆ ಮನುಷ್ಯನು ತನ್ನ ಕರ್ಮಾನುಸಾರ ದೇಹವನ್ನು ಧರಿಸಿದರೆ, ಭಗವಂತನು ತನ್ನ ಸ್ವೇಚ್ಛೆಯಿಂದ ಶರೀರ ಧರಿಸುತ್ತಾನೆ. ಒಬ್ಬ ವ್ಯಕ್ತಿಯು ಬಾವಿಯಲ್ಲಿ ಬಿದ್ದಾಗ ಮತ್ತೊಬ್ಬನು ಅವನನ್ನು ಮೇಲಕ್ಕೆತ್ತಿ ಕಾಪಾಡಲು ಬಾವಿಗೆ ಇಳಿಯುತ್ತಾನೆ. ಇಲ್ಲಿ ಇಬ್ಬರೂ ಬಾವಿಗೆ ಬಿದ್ದಿದ್ದಾರೆ, ಆದರೆ ಇವರೀರ್ವರ ಬಾವಿಗೆ ಬೀಳುವಿಕೆಯು ಸಮವಲ್ಲ. ಒಬ್ಬನು ತನ್ನ ಕರ್ಮದ ಕಾರಣದಿಂದ ಬಾವಿಗೆ ಬಿದ್ದಿದ್ದರೆ, ಮತ್ತೊಬ್ಬ ಆತನನ್ನು ಕಾಪಾಡಲು ಬಾವಿಗೆ ಇಳಿದವನಾಗಿದ್ದಾನೆ. 'ಅವತಾರ' ಶಬ್ದದ ಅರ್ಥ 'ಇಳಿಯುವುದು' ಎಂಬುದಾಗಿದೆ. ಯಾವಾಗ ಭಗವಂತನು ತನ್ನ ಮೂಲಸ್ವರೂಪವನ್ನು ಮರೆಮಾಚಿ ಮರ್ತ್ಯಲೋಕದಲ್ಲಿ ಮನುಷ್ಯ ದೇಹವನ್ನು ಧರಿಸುತ್ತಾನೆಯೋ, ಆಗ ಅದನ್ನು 'ಅವತಾರ' ಎಂದು ಕರೆಯಲಾಗುತ್ತದೆ.

ಗೀತೆಯಲ್ಲಿ ಶ್ರೀಭಗವಂತನು ಹೀಗೆ ಹೇಳುತ್ತಾನೆ **"ಅಜೋಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಪಿ ಸನ್ | ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ||"** ನಾನು ಅಜನ್ಮನು ಮತ್ತು ಅವಿನಾಶಿ ಸ್ವರೂಪನಾಗಿದ್ದರೂ, ಸಮಸ್ತ ಪ್ರಾಣಿಗಳ ಈಶ್ವರನಾಗಿದ್ದರೂ ಸಹ ನನ್ನ ಪ್ರಕೃತಿಯನ್ನು ಅಧೀನವಾಗಿಸಿಕೊಂಡು ನನ್ನ ಯೋಗಮಾಯೆಯಿಂದ ಪ್ರಕಟಗೊಳ್ಳುತ್ತೇನೆ.

ಮನುಷ್ಯನಿಗೂ ಮತ್ತು ಈಶ್ವರನಿಗೂ ಇರುವ ವ್ಯತ್ಯಾಸವೇನೆಂದರೆ, ಮನುಷ್ಯನು ಮಾಯೆಗೆ ವಶನಾಗಿ ಜನ್ಮ ತಾಳಿದರೆ, ಭಗವಂತನು ಆ ಮಾಯೆಯನ್ನು ತನ್ನ ಅಧೀನವಾಗಿಸಿಕೊಂಡು ಅವತಾರ ತಾಳುತ್ತಾನೆ. ಈಶ್ವರನು ಆನಂದ ಸ್ವರೂಪನಾದ ಕಾರಣ ಸಂಸಾರದ ಸುಖ-ದುಃಖಗಳಿಂದ ಸದಾ ಅಪ್ರಭಾವಿತನಾಗಿರುತ್ತಾನೆ, ಆದರೆ ಮನುಷ್ಯನು ಮಾಯೆಯ ಕಾರಣದಿಂದಾಗಿ ನಿರಂತರ ದುಃಖವನ್ನೇ ಭೋಗಿಸುತ್ತಿರುತ್ತಾನೆ. ಈ ದುಃಖದಿಂದ ಬಿಡುಗಡೆ ಹೊಂದುವ ಏಕೈಕ ಉಪಾಯವೆಂದರೆ ಮಾಯೆಯನ್ನು ದಾಟುವುದೇ ಆಗಿದೆ.

ಸಾಕ್ಷಾತ್ ಶ್ರೀ ದತ್ತಾತ್ರೇಯರು ಶ್ರೀ ಸದ್ಗುರು ಮಾಣಿಕಪ್ರಭು ಮಹಾರಾಜರ ರೂಪದಲ್ಲಿ ಅವತರಿಸಿ ಈ ಮಾಯೆಯನ್ನು ದಾಟುವ ಮಾರ್ಗವನ್ನು ಜಗತ್ತಿಗೆ ತೋರಿಸಿದ್ದಾರೆ. **"ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ| ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ||"** ನನ್ನ ಈ ಗುಣಮಯಿಯಾದ ದೈವೀ ಮಾಯೆಯು ಬಹಳ ದುಸ್ತರವಾಗಿದೆ, ಅಂದರೆ ದಾಟಲು ಅತ್ಯಂತ ಕಠಿಣವಾದದ್ದಾಗಿದೆ. ಯಾರು ಕೇವಲ ನನ್ನಲ್ಲಿಯೇ ಶರಣಾಗುವರೋ, ಅವರು ಈ ಮಾಯೆಯನ್ನು ದಾಟಬಲ್ಲರು.

ಪ್ರಭುವಿನಲ್ಲಿ ಶರಣು ಹೋಗಲು ಶ್ರೀ ದತ್ತ ಜಯಂತಿ ಮಹೋತ್ಸವಕ್ಕಿಂತ ಒಳ್ಳೆಯ ಮುಹೂರ್ತ ಮತ್ತೊಂದಿಲ್ಲ. ಆದಕಾರಣ ತಮಗೆಲ್ಲ ಅತ್ಯಂತ ಆನಂದ ಪೂರ್ವಕವಾಗಿ ತಿಳಿಯಪಡಿಸುವುದೇನೆಂದರೆ **ಶ್ರೀಪ್ರಭುಗಳ ಮಹಾಮಂಗಲಪ್ರದವಾದ 208ನೇ ಶ್ರೀ ದತ್ತ ಜಯಂತ್ಯುತ್ಸವವು ಮಾರ್ಗಶೀರ್ಷ ಶುಕ್ಲ ಏಕಾದಶಿ, ಸೋಮವಾರ, 1 ಡಿಸೆಂಬರ್ 2025 ರಿಂದ ಮಾರ್ಗಶೀರ್ಷ ಕೃಷ್ಣ ಪ್ರತಿಪದ ಶುಕ್ರವಾರ 5 ಡಿಸೆಂಬರ್ 2025 ರವರೆಗೆ** ಆಯೋಜಿತ ಕಾರ್ಯಕ್ರಮಾನುಸಾರವಾಗಿ ಅತ್ಯಂತ ವೈಭವಪೂರ್ವಕವಾಗಿ ಸಂಪನ್ನಗೊಳ್ಳಲಿದೆ. ಆದಕಾರಣ ಈ ಮಹಾಮಂಗಲ ಉತ್ಸವದಲ್ಲಿ ತಾವೆಲ್ಲರೂ ಸಕುಟುಂಬ ಸಪರಿವಾರರಾಗಿ ಆಗಮಿಸಿ ಶ್ರೀಗಳ ದರ್ಶನ, ತೀರ್ಥಪ್ರಸಾದ, ಸೇವನೆ ಹಾಗೂ ಭಜನ-ಕೀರ್ತನೆಗಳಲ್ಲಿ ಪಾಲ್ಗೊಂಡು ನಮ್ಮ ಆನಂದವನ್ನು ನೂರ್ಮಡಿಗೊಳಿಸಬೇಕು.

# ಶ್ರೀ ದತ್ತಜಯಂತಿ ಮಹೋತ್ಸವ 2025 - ಕಾರ್ಯಕ್ರಮಗಳು

## ಶನಿವಾರ 29-11-2025



### ತೀರ್ಥಸ್ನಾನ ಹಾಗು ಯೋಗದಂಡ ಪೂಜೆ

| | | |
|---|---|---|
| ಮಧ್ಯಾಹ್ನ | 02:00 | ತೀರ್ಥ ಸ್ನಾನ |
| ಮಧ್ಯಾಹ್ನ | 03:00 | ಯೋಗದಂಡ ಪೂಜೆ |
| ರಾತ್ರಿ | 08:30 | ಮಹಾಪ್ರಸಾದ |

## ರವಿವಾರ 30-11-2025



### ಸಕಲದೇವತಾ ನಿಮಂತ್ರಣ

| | | |
|---|---|---|
| ಮುಂಜಾನೆ | 10:00 | ಗಣಪತಿ ಪೂಜೆ, ಚಂಡಿಪಾಠ |
| ಸಂಜೆ | 06:00 | ಸಕಲದೇವತಾ ನಿಮಂತ್ರಣ |
| ರಾತ್ರಿ | 08:00 | ಮಹಾಪ್ರಸಾದ |

## ಸೋಮವಾರ 1-12-2025



### 160ನೇ ಶ್ರೀಪ್ರಭು ಪುಣ್ಯತಿಥಿ

| | | |
|---|---|---|
| ಮುಂಜಾನೆ | 06:43 | ಸುಪ್ರಭಾತ ಸೇವೆ |
| ಮುಂಜಾನೆ | 07:30 | ಮಹಾರುದ್ರಾಭಿಷೇಕ, ಜಪ |
| ಮುಂಜಾನೆ | 10:30 | ರಾಜೋಪಚಾರ ಪೂಜೆ |
| ಮಧ್ಯಾಹ್ನ | 03:00 | ಆರಾಧನೆ |
| ಸಂಜೆ | 07:00 | ಪ್ರದೋಷಪೂಜೆ |
| ರಾತ್ರಿ | 08:30 | ಮಹಾಪ್ರಸಾದ |



## ಮಂಗಳವಾರ 2-12-2025



### ಶ್ರೀಪ್ರಭು ದ್ವಾದಶಿ

| | | |
|---|---|---|
| ಮುಂಜಾನೆ | 10:00 | ಸಂಗಮ ಸ್ನಾನ |
| ಮುಂಜಾನೆ | 11:00 | ಮಹಾರುದ್ರಾಭಿಷೇಕ, ಜಪ |
| ಮಧ್ಯಾಹ್ನ | 02:00 | ರಾಜೋಪಚಾರ ಪೂಜೆ |
| ಸಂಜೆ | 07:00 | ಪ್ರದೋಷಪೂಜೆ |
| ರಾತ್ರಿ | 08:30 | ಮಹಾಪ್ರಸಾದ |

## ಬುಧವಾರ 3-12-2025



### ದಕ್ಷಿಣ ದರಬಾರ ಹಾಗು ಗುರುಪೂಜೆ

| | | |
|---|---|---|
| ಮುಂಜಾನೆ | 09:00 | ಮಹಾರುದ್ರಾಭಿಷೇಕ, ಜಪ |
| ಮಧ್ಯಾಹ್ನ | 03:00 | ದಕ್ಷಿಣ ದರಬಾರ ಹಾಗು ಗುರುಪೂಜೆ |
| ಸಂಜೆ | 06:00 | ಪ್ರವಚನ |
| ಸಂಜೆ | 07:00 | ಪ್ರದೋಷಪೂಜೆ |
| ರಾತ್ರಿ | 08:00 | ಮಹಾಪ್ರಸಾದ |




## ಗುರುವಾರ 4-12-2025

### 208ನೇ ಶ್ರೀಪ್ರಭು ಜಯಂತಿ

| | | |
|---|---|---|
| ಮುಂಜಾನೆ | 09:00 | ಮಹಾರುದ್ರಾಭಿಷೇಕ, ಜಪ |
| ಮಧ್ಯಾಹ್ನ | 01:00 | ದರ್ಶನ ಹಾಗು ಪಾದ್ಯಪೂಜೆ |
| ಸಂಜೆ | 07:00 | ರಾಜೋಪಚಾರ ಪೂಜೆ |
| ರಾತ್ರಿ | 09:00 | ಮಹಾಪ್ರಸಾದ |



## ಶುಕ್ರವಾರ 5-12-2025



### ಶ್ರೀಪ್ರಭು ದರಬಾರ

| | | |
|---|---|---|
| ರಾತ್ರಿ | 11:30 | ಪ್ರಭು ದರಬಾರ ಪ್ರಾರಂಭ |
| ರಾತ್ರಿ | 12:00 | ಪ್ರಭು ಜನ್ಮೋತ್ಸವ |
| ರಾತ್ರಿ | 12:30 | ಸಂಗೀತ ಸಭೆ |

**ಅಪರಿಹಾರ್ಯ ಪರಿಸ್ಥಿತಿಯಲ್ಲಿ ಮೇಲಿನ ಕಾರ್ಯಕ್ರಮಗಳಲ್ಲಿ ಬದಲಾವಣೆಯಾಗುವ ಸಾಧ್ಯತೆವಿರುತ್ತದೆ**



एकं सद्विप्रा बहुधा वदन्ति

**Shri Manik Prabhu Samsthan - Maniknagar**

URL: https://manikprabhu.org | Contact: +91 9448469913

DONATE FOR

## JAYANTI ANNADAN

https://manikprabhu.org/jayanti-annadaan/

DONATE FOR

## DATTA JAYANTI

https://manikprabhu.org/product/donation_prabhu_seva/

# Datta Jayanti Mahotsav 2025 - Annadaan



## PRABHU PUNYATITHI
**Mon. 1-12-2025**

| | |
|---|---|
| Breakfast | 12,000 |
| Chatni | 6,500 |
| Bhaji | 8,500 |
| Poori | 9,000 |
| Shrikhand | 10,000 |
| Rice | 20,000 |
| Kadhi | 9,000 |
| Sheera | 9,000 |
| Ghee | 9,000 |
| Banana Leaves | 9,000 |
| **Total** | **1,02,000** |

## PRABHU DWADASHI
**Tue. 2-12-2025**

| | |
|---|---|
| Breakfast | 12,000 |
| Chatni | 6,500 |
| Bhaji | 8,500 |
| Puran Poli | 16,000 |
| Milk | 9,000 |
| Rice | 25,000 |
| Sambar | 11,000 |
| Vada | 11,000 |
| Ghee | 12,000 |
| Banana Leaves | 10,000 |
| **Total** | **1,21,000** |

## DAKSHINA DARBAR GURU POOJAN
**Wed. 3-12-2025**

| | |
|---|---|
| Breakfast | 12,000 |
| Chatni | 6,500 |
| Bhaji | 8,500 |
| Doodh Kheer | 11,000 |
| Rice | 25,000 |
| Sambar | 11,000 |
| Chitrannam | 11,000 |
| Ghee | 8,000 |
| Banana Leaves | 10,000 |
| **Total** | **1,03,000** |

## PRABHU JAYANTI
**Thu. 4-12-2025**

| | |
|---|---|
| Breakfast | 15,000 |
| Rice | 1,00,000 |
| Sambar | 75,000 |
| Bondi Laddu | 1,00,000 |
| Pattal | 60,000 |
| **Total** | **3,50,000** |

## PRABHU DARBAR
**Fri. 5-12-2025**

Total Darbar Annadan

**1,51,000**

### Net Banking/Credit/Debit Card

Go to
https://manikprabhu.org/jayanti-annadaan/




### QR Code/UPI

**Manigiri Welfare Trust**

**QR919448469913-1839@unionbankofindia**

### Cheque/Draft/Bank Transfer

| | |
|---|---|
| Bank | : **State Bank of India** |
| A/c Name | : **Manigiri Welfare Trust** |
| A/c Number | : **30181342057** |
| A/c Type | : **Savings** |
| IFSC | : **SBIN0006028** |
| Pan Number | : **AAATM9811D** |
| Branch | : **Humnabad** |

**Important**

Please inform the Samsthan about your transaction by email only to **accounts@manikprabhu.org** or by **SMS/Whatsapp to Ganesh Satonkar - 9535119497**. All donations for Annadaan during Shri Datta Jayanti Mahotsav 2025 are exempt from income tax under section 80G of the Indian Income Tax, Act, 1961